ಯಾವ ಸಂಕೋಚವಿಲ್ಲದೆ ಆಸನ ಎತ್ತಿ ಸಾರ್ವಜನಿಕವಾಗಿ ಹೊರಿಕೆ ಹೊಡೆಯುವುದು ಅಸಹ್ಯ ಎಂದು ತಿಳಿಯಲಾರದಷ್ಟು ಗಂಡ ಅಸೂಕ್ಷ್ಮ ಎಂದು ಅವಳಿಗೆ ಚಡಪಡಿಕೆ; ಪಾಚಣ್ಣನ ಜರ್ಜರಿತ ಕುಸಿದ ವಾತ–ಪಿತ್ಥ–ಕಫದ ಶರೀರ ಕಲ್ಪಿಸಿಕೊಂಡಾಗ ರಾತ್ರಿಯ ಸಂಗವೇ ವಾಕರಿಕೆ ಉಂಟು ಮಾಡುತ್ತಿತ್ತು. ಪತ್ನಿಶೇಷದ ಅವನ ಎಂಜಲೆಲೆಯಲ್ಲಿ ಊಟ ಮಾಡುವುದನ್ನು ಅವಳು ನಿಲ್ಲಿಸಿದ್ದಳು; ಗಂಡನೊಡನೆಯ ಈ ಅಂತರವನ್ನು ಗಮನಿಸಿದ ಕೆಲ ಗೃಹಸ್ಥರು ಅಕ್ಕುವನ್ನು ಒಂದು ನಮೂನೆ ಆಸೆಯ ಅಮಲಿನಿಂದ ನೋಡುವಾಗ ಅಪಕರ್ಷಣದಿಂದಿರುವುದೇ ದೊಡ್ಡ ತಪಸ್ಸಾಗುತ್ತಿತ್ತು. ಒಂದೇ ಗಂಡು ಮಗುವಿಗೇ ಹಾಸಿಗೆಯ ಸಖ್ಯವನ್ನು ಚುಕ್ತಾ ಮಾಡಿ ದಾಂಪತ್ಯವನ್ನು ಮಡಚಿ ನಾಗೊಂದಿಗೆಯ ಮೇಲಿಟ್ಟಳು; "ಹೆಂಗಸ್ರಿಗೆ ಒಂದು ಹಡೆದ ನಂತ್ರ ಗಂಡ ಬೇಡಾಗಿ ಹೋಗ್ತಾ ಹೇಳಿ" ಎಂದು ಕವಳದ ಕೆಂಪು ರಸದ ನಡುವೆ ಅದೊಂದು ಗಂಡು ಜೀವಿಗಳ ಸಾರ್ವಕಾಲಿಕ ಜಾಗತಿಕ ಸತ್ಯ ಸಂಕಟ ಎಂಬಂತೆ ಪಾಚಣ್ಣ ಇಸ್ಪೀಟ್ ತುರ್ಪಿನ ಎಲೆಗಳ ಒಕ್ಕೈಯನ್ನು ಜಮಖಾನೆಯ ಮೇಲೆ ಜಪ್ಪುವಾಗ ಹೇಳುತ್ತಿದ್ದ.

ಪಾಚಣ್ಣ ಮತ್ತು ಅಕ್ಕು ನಡುವೆ ಮದುವೆ ಉಡುಗರೆ ಕೊಡುವ ಸಂದರ್ಭದಲ್ಲಿ ಮುತ್ತೈದೆಯರಿಗೆ ಅರಿಸಿನ ಕುಂಕುಮ ಹಚ್ಚಿ ಖಣದ ಜತೆಗೆ ನೋಟು ಇಡುವಾಗ ಜಗಳವಾಗುತ್ತಿತ್ತು. ಮದುವೆ ಮಕ್ಕಳಿಗೆ ಉಡುಗರೆ ಕೊಡುವುದು ವಾಜ್ಮೆ; ಅವರ ಆಸುಪಾಸಿನಲ್ಲಿ ಕಾಯುತ್ತ ಕುಳಿತಿರುವ ಅಪ್ಪ–ಅಬ್ಬೆ, ಅಜ್ಜ–ಅಜ್ಜಿ, ಅತ್ತೆ–ಮಾವ, ಅಕ್ಕ–ಭಾವ ಅವರ ಮಕ್ಕಳು ಎಲ್ಲರಿಗೆ ಉಡುಗರೆ ಕೊಡಲು ಪಾಚಣ್ಣ ಸರ್ವದಾ ಸಿದ್ಧನಿರುತ್ತಿರಲಿಲ್ಲ. ನೆಂಟರಿಷ್ಟರು ಕೊಡುವಾಗ ತನಗೆ ಅವಮಾನವಲ್ಲವೆ ಎಂದು ಅಕ್ಕು ವಾದ. ಕವರಿನಲ್ಲಿ ನೋಟಿಟ್ಟು ಕೊಡುವುದು ಹೆಚ್ಚು ಸುರಕ್ಷಿತ ಲಾಭವೆಂದು ಅವನ ವಾದ; ಐದೇ ಇಟ್ಟರೂ ಅಷ್ಟೇ ಸಾವಿರ ಇಟ್ಟರೂ ಅಷ್ಟೇ, ಅದು ಯಾರಿಗೂ ಕಾಣಲಾರದು ಎಂಬುದು ಅವನ ಲೆಕ್ಕಾಚಾರ. ನಮ್ಮ ಯೋಗ್ಯತೆಗೆ, ಆತ್ಮಸಾಕ್ಷಿಗೆ ತಕ್ಕುದಾಗಿ ಕೊಡಬೇಕು ಎಂದು ಅಕ್ಕು ತಕರಾರು. ಮೊದಮೊದಲು ಸೋಸಿದ ಚಹಾ ಸೊಪ್ಪನ್ನೇ ಮತ್ತೊಮ್ಮೆ ಕುದಿಸಿ ಆಳುಗಳಿಗೆ ಕೊಟ್ಟರೆ ಸಾಕು ಎನ್ನುವ ಜಿಪುಣ ನಿಲುವಿನ ಗಂಡನಿಗೆ ಗೊತ್ತಾಗದಂತೆ ಅಕ್ಕು ತಿರುಗಾಟ ಮುಗಿಸಿ ಕಳಚಿಡುತ್ತಿದ್ದ ಅಂಗಿಯಲ್ಲಿರುತ್ತಿದ್ದ ಅಲ್ಪಸ್ವಲ್ಪ ಹಣವನ್ನು ತೊಳೆಯುವ ನೆಪದಲ್ಲಿ ಲಪಟಾಯಿಸುವ ಉಪಾಯ ಹೂಡಿದಳು. ತವರಿಗೆ ತುಪ್ಪ ಕಳಿಸುವಾಗ ಪಾಚಣ್ಣನ ಕಣ್ತಪ್ಪಿಸಿ ಕದ್ದುಮುಚ್ಚಿದ ವ್ಯವಹಾರವಾಗುತ್ತಿತ್ತು. ಮೊದಲ ಹೆಂಡತಿಯ ದಾಗೀನನ್ನು ಕಪಾಟಿನಿಂದ ಹೊರ ತೆಗೆದು ತೋರಿಸದ ಸಂಶಯ ಪಿಶಾಚಿ ಗಂಡ ವಿಮೆ ಪಾಲಿಸಿಯ ಬಗೆಗೂ ಬಿಟ್ಟು ಕೊಡಬಾರದ ಗುಟ್ಟೆನ್ನುವಂತೆ ಅಡಗಿಸಿಟ್ಟಿರುವುದು ಅವಳ ಗಮನಕ್ಕೆ ಬಂದಿತ್ತು; ಮಗಳ ಮದುವೆಯ ಕಾಲಕ್ಕಿರಲೆಂದು ಜೋಪಾನವಾಗಿಟ್ಟಿರಬೇಕೆಂದು ಸಂತೈಸಿಕೊಂಡಳು. "ನಿನ್ನ ಅಕ್ಕನ ಹಾದರದ ಕತೆ ಗೊತ್ತಿದ್ದವರು ಯಾರೂ ನಿನ್ನ ಮೂಸೋದಕ್ಕ ಬತ್ತಿದ್ವಿಲ್ಲೆ ತಿಳ್ಕಾ." ಎಂದು ಒಮ್ಮೆ ಪಾಚಣ್ಣ ಘನ ಘೋರ ಜಗಳದ ನಡುವೆ ತಾನು ಮದುವೆಯಾಗಿ ಉಪಕಾರ ಮಾಡಿದೆ ಎಂಬರ್ಥದಲ್ಲಿ ಕರ್ಕಶ ಕಿರುಚಿದಾಗ ಅಕ್ಕು ಅಂದೇ ನಿರ್ಧರಿಸಿಬಿಟ್ಟಳು, ಇನ್ನು ಮುಂದೆ ಒಳ ದಾರಿಯ ಕಳು, ಸುಳ್ಳು ನಿಲ್ಲಿಸಿಬಿಡಲು; ಮತ್ತು, "ಈ ಮನೇಲಿ ಎನಗೆ ಅಧಿಕಾರ ಇದ್ದು" ಎಂದು ಬಹಿರಂಗ ಯುದ್ಧವನ್ನು ಘೋಷಿಸಿದಳು. ಲೆಕ್ಕ ಮಾಡಿದರೆ ಸರಿಯಾಗಿ ನಾಲ್ಕು ಗಟ್ಟಿ ಹಲ್ಲುಗಳಿರದ ಮುದಿ ಪೀಡೆಯನ್ನು ಯಾವ ಜನ್ಮದ ಪಾಪದಿಂದ ಏಕೋನಿಷ್ಠೆಯಿಂದ ಒಪ್ಪಿಕೊಂಡೆನೇನೊ ಎಂದು ತುಟಿಗೆ ಬಂದ ಮಾತನ್ನು ನುಂಗಿದಳು. ಪಾಚಣ್ಣನ ಮಾತು ಅವಳ ಮರ್ಮಕ್ಕೆ ಒದ್ದಂತಾಗಿತ್ತು. 'ಈ ಮುದುಕನ ಮದುವೆ ಆಗುದ್ಕಿಂತ ಯಾರ್ದಾರು ಸಂಗ್ತಿಗೆ ಓಡಿ ಹೋಗೋದು ಚಲೋದು ತಂಗಿ' ಅಪ್ಪಿಯಕ್ಕ ಹೇಳಿದ ಮಾತು ನೆನಪಾಗಿ ಕಣ್ಣು ತುಂಬಿ ಬಂತು. ಆಡಿದ ಎಲ್ಲ ಆಟಗಳಲ್ಲಿ ಸೋತ ನಾಯಕನ ಹತಾಶೆ, ದಿಗಿಲು ತುಂಬಿಕೊಂಡ ಅಪ್ಪನ ದೈನ್ಯ ಮುಖ ನೋಡಲಾರದೆ ಈ ಸಂಬಂಧವನ್ನು ನಿರುಪಾಯ ಒಪ್ಪಿಕೊಂಡೆ ಎಂದು ಮನಸನ್ನು ಓಲೈಸುವಳು; ಊರು ಕೇರಿಯವರ ಬಾಯಲ್ಲಿ ತಾನು